

ಮುಂದೇನೆಂಬ ಪ್ರಶ್ನೆಗೆ ವಿದ್ಯಾರ್ಥಿಗಳು, ಪೋಷಕರು ಎಚ್ಚರಿಕೆಯಿಂದ ಮುಖಾಮುಖಿಯಾಗಬೇಕು.

ಪದವಿಪೂರ್ವ ತರಗತಿಯಲ್ಲಿ ಯಾವ ವಿಷಯಗಳ ಸಂಯೋಜನೆಯನ್ನು ಆಯ್ಕೆ ಮಾಡಿಕೊಂಡರೆ ಉತ್ತಮ ಎನ್ನುವುದು ಬಹುತೇಕ ವಿದ್ಯಾರ್ಥಿಗಳನ್ನು ಕಾಡುವ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮೊದಲು – ವಿದ್ಯಾರ್ಥಿಯು ತಮ್ಮ ಗುರಿ ಸಾಧನೆಯ ನಿಟ್ಟಿನಲ್ಲಿ ಇರುವ ಅವಕಾಶಗಳ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದುಕೊಳ್ಳಬೇಕು.

## ಬಯಕೆಗಳನ್ನು ಬರವಣಿಗೆಗೆ ಇಳಿಸಿ

ಮೊದಲಿಗೆ ಮಾಡಬೇಕಾದ ಕೆಲಸ, ವಿದ್ಯಾರ್ಥಿಗಳು ತಮ್ಮ ಆಸಕ್ತಿಗಳ ಪಟ್ಟಿ ಮಾಡಿಕೊಳ್ಳುವುದು. ಈ ಆಸಕ್ತಿಗಳಿಗೆ ತಕ್ಕಂತೆ ತಾವು ಮಾಡಬಹುದಾದ ಉದ್ಯೋಗಗಳ ಪಟ್ಟಿಯನ್ನೂ ಸಿದ್ಧಪಡಿಸಿಕೊಳ್ಳಿ. ಇಂಥ ಪಟ್ಟಿಯ ತಯಾರಿಕೆ, ನಿಮಗೇನು ಬೇಕು ಎನ್ನುವುದನ್ನು ನಿಮಗೇ ಸ್ಪಷ್ಟಪಡಿಸುತ್ತದೆ. ಅಷ್ಟು ಮಾತ್ರವಲ್ಲ, ನಾವು ಸಾಗಬೇಕಾದ ಮಾರ್ಗ ಸ್ಪಷ್ಟವಾದಾಗ ಗೊಂದಲಗಳು ಉಂಟಾಗುವುದಿಲ್ಲ.

ಮಾರ್ಗವನ್ನು ಸ್ಪಷ್ಟಪಡಿಸಿಕೊಂಡರಷ್ಟೇ ಸಾಲದು – ಗುರಿ ಸೇರಲಿಕ್ಕಾಗಿ ಮಾಡಬೇಕಾದ ಚಟುವಟಿಕೆಗಳ ಕುರಿತೂ ಯೋಚಿಸಬೇಕು. ಅದಕ್ಕೆ ಪೂರ್ವಸಿದ್ಧತೆಯನ್ನು ತಕ್ಷಣದಿಂದಲೇ ಆರಂಭಿಸಬೇಕು. ಪ್ರತಿಯೊಂದು ಉದ್ಯೋಗವೂ ಅದರದ್ದೇ ಆದ ಕೌಶಲಗಳನ್ನು ಬಯಸುತ್ತದೆ. ಅಂಥ ಕೌಶಲಗಳು ನಮಗಿವೆಯೇ ಎನ್ನುವ ಬಗ್ಗೆ ಯೋಚಿಸಬೇಕು. ಇದ್ದರೆ ಆ ಕೌಶಲಗಳನ್ನು ಮತ್ತಷ್ಟು ಉತ್ತಮಪಡಿಸಿಕೊಳ್ಳಲು, ಇಲ್ಲದೆ ಹೋದರೆ ರೂಢಿಸಿಕೊಳ್ಳಲು ಪ್ರಯತ್ನಿಸಬೇಕು.

ಹೀಗೆ ಮಾರ್ಗ ಮತ್ತು ಗುರಿ ಸ್ಪಷ್ಟವಾದ ನಂತರ ತಮ್ಮ ಯೋಚನೆಗಳ ಕುರಿತು ಪೋಷಕರು ಹಾಗೂ ಶಿಕ್ಷಕರೊಂದಿಗೆ ಚರ್ಚಿಸಬೇಕು. ಈ ಚರ್ಚೆಯ ಮೂಲಕ ಗೊಂದಲಗಳು ಬಗೆಹರಿಯುವುದರ ಜೊತೆಗೆ ಗುರಿ ಮತ್ತಷ್ಟು ಸ್ಪಷ್ಟಗೊಳ್ಳುವುದು.

## ಮೂರು ದಾರಿಗಳು

ವೃತ್ತಿಪರ ಕೋರ್ಸ್ ಇಚ್ಛಿಸುವವರು, ನಿರ್ದಿಷ್ಟ ವಿಷಯದಲ್ಲಿ ಪದವಿ ಕೋರ್ಸ್‌ಗೆ ಸೇರಿ ಅಧ್ಯಯನ ನಡೆಸುವುದು, ಯಾವುದಾದರೂ ವೃತ್ತಿ ಶಿಕ್ಷಣಕ್ಕೆ ಪ್ರವೇಶ ಪಡೆಯುವುದು – ಇವು ಪದವಿಪೂರ್ವ ವಿದ್ಯಾರ್ಥಿಗಳ ಮುಂದಿರುವ ಮೂರು ಮುಖ್ಯ ಸಾಧ್ಯತೆಗಳು. ಈ ಸಾಧ್ಯತೆಗಳನ್ನು ವಿಜ್ಞಾನ, ಕಲೆ ಮತ್ತು ವಾಣಿಜ್ಯ ರೂಪಗಳಲ್ಲೂ ವಿಂಗಡಿಸಬಹುದು. ಪ್ರತಿ ವಿಭಾಗದಲ್ಲೂ ವಿದ್ಯಾರ್ಥಿಗೆ ವಿಷಯವಾರು ಆಯ್ಕೆಗೆ ಅವಕಾಶಗಳಿವೆ. ಅವುಗಳನ್ನು ಕೊಂಚ ವಿವರವಾಗಿ ಪರಿಶೀಲಿಸೋಣ.

## ವಿಜ್ಞಾನ ವಿಭಾಗ

ವಿಜ್ಞಾನದ ವಿದ್ಯಾರ್ಥಿಗಳು ಪಿಯುಸಿ ನಂತರ ಸಿ.ಇ.ಟಿ., ಜೆ.ಇ.ಇ., ಮೊದಲಾದ ಪರೀಕ್ಷೆಗಳನ್ನು ಬರೆಯುವುದು ಸಾಮಾನ್ಯ. ಆ ಪರೀಕ್ಷೆಗಳಲ್ಲಿ ಪಡೆಯುವ ರ‍್ಯಾಂಕ್‌ಗಳ ಆಧಾರದ ಮೇಲೆ ಎಂಜಿನಿಯರಿಂಗ್ ಕೋರ್ಸ್‌ಗಳನ್ನು ಆರಿಸಿಕೊಳ್ಳುತ್ತಾರೆ. ಎಂಜಿನಿಯರಿಂಗ್‌ನಲ್ಲಿ ಆಸಕ್ತಿ ಇಲ್ಲದವರು 'ನೀಟ್' (ಎನ್.ಇ.ಇ.ಟಿ.) ಪ್ರವೇಶ ಪರೀಕ್ಷೆ ಬರೆದು, ಅದರ ರ‍್ಯಾಂಕ್ ಆಧಾರದ ಮೇಲೆ ವೈದ್ಯಕೀಯ ಕೋರ್ಸ್‌ಗಳನ್ನು ಆರಿಸಿಕೊಳ್ಳುತ್ತಾರೆ. ಆದರೆ, ಎಂಜಿನಿಯರಿಂಗ್ ಅಥವಾ ವೈದ್ಯಕೀಯ ಶಿಕ್ಷಣವಷ್ಟೇ ವಿದ್ಯಾರ್ಥಿಗಳಿಗೆ ಇರುವ ಮುಖ್ಯವಾದ ಆಯ್ಕೆಗಳು ಎಂದರ್ಥವಲ್ಲ. ಇವುಗಳನ್ನು ಹೊರತುಪಡಿಸಿಯೂ ಹಲವು ಜ್ಞಾನಕ್ಷೇತ್ರಗಳಲ್ಲಿ ಕಲಿಕೆಗೆ ಅವಕಾಶಗಳಿವೆ. ವಿದ್ಯಾರ್ಥಿಗಳು ತಮ್ಮ ಆಸಕ್ತಿಗೆ ತಕ್ಕಂತೆ ಆ ಅವಕಾಶಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಉದಾಹರಣೆಗೆ, ವಿಜ್ಞಾನ ಕ್ಷೇತ್ರದಲ್ಲಿ ಆಸಕ್ತಿಯಿರುವ ವಿದ್ಯಾರ್ಥಿಯೊಬ್ಬ ಶುದ್ಧ ವಿಜ್ಞಾನದಲ್ಲಿ ಪದವಿ ಗಳಿಸಿ, ಅದಾದ ನಂತರ ತನ್ನ ಆಸಕ್ತಿಯ ಕ್ಷೇತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆಯಲಿಕ್ಕೆ ಪ್ರಯತ್ನಿಸಬಹುದು. ನಂತರದ ಹಂತದಲ್ಲಿ ಉನ್ನತ ಅಧ್ಯಯನ, ಸಂಶೋಧನೆ ಹಾಗೂ ಪಿಎಚ್.ಡಿ. ಪಡೆಯಲೂ ಅವಕಾಶವಿದೆ.

ಪ್ರಸ್ತುತ ಜಿಲ್ಲಾಕೇಂದ್ರಗಳಲ್ಲೂ ವಿಶ್ವವಿದ್ಯಾಲಯಗಳ ಅಧ್ಯಯನ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿರುವುದು ವಿದ್ಯಾರ್ಥಿಗಳಿಗೆ ಅನುಕೂಲಕರವಾಗಿದೆ. ಕೆಲವು ಖಾಸಗಿ ಕಾಲೇಜುಗಳೂ ಸ್ನಾತಕೋತ್ತರ ಅಧ್ಯಯನ ಕೇಂದ್ರಗಳನ್ನು ತೆರೆದಿವೆ. ಕಲಿಕೆಯ ಅವಕಾಶಗಳ ವಿಕೇಂದ್ರೀಕರಣದ ನಂತರವೂ ಶುದ್ಧ ವಿಜ್ಞಾನವನ್ನು ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಿದೆ.

ವಿಜ್ಞಾನದ ವಿದ್ಯಾರ್ಥಿಗಳಿಗೆ ವಿಪುಲ ಉದ್ಯೋಗಾವಕಾಶಗಳು ಹಾಗೂ ಸಂಶೋಧನೆಗೆ ಮುಕ್ತ ಅವಕಾಶಗಳು ಇದೆ. 'ಶುದ್ಧ ವಿಜ್ಞಾನ' ಪದವಿಯ ಬಗ್ಗೆ ಅವರು ಗಮನಹರಿಸಬಹುದು. 'ಟಾಟಾ ವಿಜ್ಞಾನ ಮಂದಿರ' (ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್) ವಿಜ್ಞಾನದ ಹಲವು ಶಾಖೆಗಳಿಗೆ ಸಂಬಂಧಿಸಿದ ಉತ್ಕೃಷ್ಟ ಸಂಶೋಧನೆಗಳಿಗೆ ನೆಲೆ. 'ಜವಾಹರಲಾಲ್ ನೆಹರೂ ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್'ನಲ್ಲಿಯೂ ವೈಜ್ಞಾನಿಕ ಸಂಶೋಧನೆಗೆ ಅವಕಾಶಗಳಿವೆ. ಮೈಸೂರಿನ ಸಿ.ಎಫ್.ಟಿ.ಆರ್.ಐ. ಆಹಾರ ತಂತ್ರಜ್ಞಾನ ಕ್ಷೇತ್ರದ ಸಂಶೋಧನೆಗಳಿಂದ ಅಂತರರಾಷ್ಟ್ರೀಯ ಖ್ಯಾತಿ ಗಳಿಸಿದೆ.

ಕೆಮಿಕಲ್ ಟೆಕ್ನಾಲಜಿ, ಸೆರಾಮಿಕ್ ಟೆಕ್ನಾಲಜಿ, ಟೆಕ್ಸ್‌ಟೈಲ್ ಟೆಕ್ನಾಲಜಿ ಮುಂತಾದ ಹಲವಾರು ಅಸಾಂಪ್ರದಾಯಿಕ ವಿಷಯಗಳಲ್ಲಿಯೂ ವಿಜ್ಞಾನದ ವಿದ್ಯಾರ್ಥಿಗಳು ಬಿ.ಟೆಕ್ ಪದವಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ಇಲ್ಲವೇ, ಬಯೋಫಿಸಿಕ್ಸ್, ಆಸ್ಟ್ರೋಫಿಸಿಕ್ಸ್, ನ್ಯೂಕ್ಲಿಯರ್ ಫಿಸಿಕ್ಸ್ ಮುಂತಾದ ವಿಶಿಷ್ಟ ವಿಷಯಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಬಹುದು. ಬಯೋಟೆಕ್ನಾಲಜಿ, ಜೆನೆಟಿಕ್ಸ್, ಮೈಕ್ರೋಬಯಾಲಜಿ ಮುಂತಾದ ಕ್ಷೇತ್ರಗಳಲ್ಲಿಯೂ ಪದವಿ ಹಾಗೂ ಸ್ನಾತಕೋತ್ತರ ಪದವಿ ಪಡೆಯಲು ಸಾಕಷ್ಟು ಅವಕಾಶಗಳಿವೆ.

ವೈದ್ಯಕೀಯ ಶಿಕ್ಷಣಕ್ಕೆ ಪೂರಕವಾದ ಹಲವು ಬಗೆಯ ಪ್ಯಾರಾ ವೈದ್ಯಕೀಯ ಕೋರ್ಸ್‌ಗಳೂ

## ನಾಗರಿಕ ಸೇವಾ ಪರೀಕ್ಷೆಗಳು

ರಾಷ್ಟ್ರಮಟ್ಟದಲ್ಲಿ ಪ್ರತಿ ವರ್ಷ ಐ.ಎ.ಎಸ್., ಐ.ಪಿ.ಎಸ್. ಮುಂತಾದ ನಾಗರಿಕ ಸೇವೆಗಳಿಗೆ ಆಯ್ಕೆ ಮಾಡಿಕೊಳ್ಳಲು 'ಯೂನಿಯನ್ ಪಬ್ಲಿಕ್ ಸರ್ವೀಸ್ ಕಮಿಷನ್' (ಯು.ಪಿ.ಎಸ್.ಸಿ.) ವತಿಯಿಂದ ಪ್ರವೇಶ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಇದಕ್ಕೆ ಕನಿಷ್ಠ ಅರ್ಹತೆ ಪದವಿ ಪಡೆದಿರಬೇಕು. ಪದವಿ ಅಧ್ಯಯನದ ಕೊನೆಯ ವರ್ಷದಿಂದಲೇ ಇದಕ್ಕೆ ಪೂರಕವಾದ ಸಿದ್ಧತೆಯನ್ನು ನೀವು ಮಾಡಿಕೊಳ್ಳಬಹುದು.